ಓ ಎಸ್ ನಂ :   52 /2014

ಡಿ ಡಬ್ಲು – 1

ದಿಃ 13-3-2018 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

**ಮುಂದುವರೆದ ಪಾಟೀಸವಾಲು : ವಾದಿ ಪರ ವಕೀಲರಾದ ಶ್ರೀ ಎಂ ಎಸ. ಬಿ. ರವರಿಂದ,**

9. ವಾದಿಯ ಮನೆ ಉತ್ತರಾಭೀಮುಖವಾಗಿ ಇದ್ದ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನಾನು ನಮ್ಮ ಮನೆಯ ವಹಿವಾಟನ್ನು ಮುಂಬಾಗಿಲಿನಿಂದ ಮಾಡುತ್ತೇನೆ. ನನ್ನ ಮನೆಯ ಮುಂಬಾಗಿಲಿನ ಬಳಿ ಗೋಡೆ ಕಟ್ಟಿದರೆ ಅಡ್ಡಾಡಲು ತೊಂದರೆಯಾಗುತ್ತದೆ ಎಂದರೆ ಸಾಕ್ಷಿ ರಸ್ತೆಯಿಂದ ಜಾಗಾ ಬಿಟ್ಟು ಕಟ್ಟಿದರೆಏನು ತೊಂದರೆಯಾಗುವುದಿಲ್ಲ ಎಂದು ನುಡಿಯುತ್ತಾರೆ. ನಾವು ವಾದಿಯ ಮನೆಗೆ ಹಚ್ಚಿಕೊಂಡೆ ನಮ್ಮ ಮನೆ ಕಟ್ಟಿದ್ದೇವೆ ಎಂದರೆ ಸರಿಯಲ್ಲ. ನಾವು ಗೋಡೆ ಕಟ್ಟಿ ವಾದಿಯ ಮನೆಯ ಕಿಡಕಿ , ಹರನಾಳಿಗೆಯನ್ನು ಮುಚ್ಚಿರುತ್ತೇವೆ ಎಂದರೆ ಸರಿಯಲ್ಲ. ಕೈಫೀಯತ್ ಸಲ್ಲಿಸಲು ನಾನು ವಕೀಲರಿಗೆ ಮಾಹಿತಿ ನೀಡಿರುತ್ತೇನೆ.

10. ನಮ್ಮ ಮತ್ತು ವಾದಿಯ ನಡುವೆ 3 ಮೊಳದ ದಾವಾ ಆಸ್ತಿಯ ಬಗ್ಗೆ 3-4 ವರ್ಷಗಳ ಹಿಂದೆ ತಂಟೆ ತಕರಾರು ಬಂದಿರುತ್ತದೆ ಎಂದರೆ ಸರಿ. ನಾವು ಹರಕತ್ತು ಮಾಡಿದ ಕಾರಣ ವಾದಿ ದಾವೇ ಸಲ್ಲಿಸಿರುತ್ತಾನೆ ಎಂದರೆ ಸರಿಯಲ್ಲ. ನಾವು ಗೋಡೆ ಕಟ್ಟಿ ಹರಕತ್ತು ಮಾಡಿಲ್ಲ. ನಾವು ಕಾನೂನು ಬಾಹಿರವಾಗಿ ದಾವಾ ಆಸ್ತಿಯ ಖುಲ್ಲಾ ಜಾಗಾದಲ್ಲಿ ಗೋಡೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವು ವಾದಿಯ ಅಡ್ಡಾಡುವ ಹಕ್ಕಿಗೆ ಮತ್ತು ಗಾಳಿ ಬೆಳಕಿನ ಹಕ್ಕಿಗೆ ತೊಂದರೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮಂದುವರೆದು ಉತ್ತರ ದಿಕ್ಕಿಗೆ ನಮ್ಮದೆ ಕಿಡಕಿ ಇದೆ ಎಂದು ನುಡಿಯುತ್ತಾರೆ. ಸದ್ರಿ ಕಿಡಕಿ ಫೋಟೋದಲ್ಲಿ ಕಾಣುತ್ತದೆ. ಬೇರೆ ದಾಖಲೆ ಹಾಜರುಪಡಿಸಿಲ್ಲ.

11. ನಮ್ಮ ಪೈಕಿ ಯಾರು ಪಂಚಾಯತಿ ಸದಸ್ಯರು ಇರುವುದಿಲ್ಲ. ಮಹಾದೇವಪ್ಪ ದನದಮನಿ ದೂರದ ಸಂಬಂದಿ ಇರುತ್ತಾನೆ. ಆತ ಪಂಚಾಯತಿ ಸದಸ್ಯನಿರುವುದಿಲ್ಲ. ಸದ್ರಿ ಮಹಾದೇವಪ್ಪನ ಸಹಾಯ ಪಡೆದು ನಾವು ಬೇಕಾಯ್ದೆಶೀರವಾಗಿ ಗೋಡೆಯನ್ನು ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಮಹಾದೇವಪ್ಪ ದನದಮನಿ ಇತನ ಹೆಂಡತಿ ಪಂಚಾಯತಿ ಸದಸ್ಯಳಿರುತ್ತಾಳೆ ಎಂದರೆ ಸರಿ. ಆಕೆಗೆ ಮತ್ತು ವಾದಿಗೆ ಮನಃಸ್ತಾಪ ಇದೆ ಎಂದರೆ ಸರಿಯಲ್ಲ. ನಾನು ಸದ್ರಿ ಮಹಾದೇವಪ್ಪನ ಹೆಂಡತಿಯ ಅಧಿಕಾರದ ದುರುಪಯೋಗ ಪಡೆದು ಬೇಕಾಯ್ದೆಶೀರವಾಗಿ ಗೋಡೆಯನ್ನು ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಪರವಾಣಿಗೆ ಪ್ರಕಾರ ಕಟ್ಟಡ ಕಟ್ಟಿದ ಬಳಿಕ ನಾನು ಮುಕ್ತಾಯ ಪ್ರಮಾಣ ಪತ್ರ ಪಡೆದುಕೊಂಡಿಲ್ಲ. ಮುಕ್ತಾಯ ಪ್ರಮಾಣ ಪತ್ರ ಪಡೆಯಲು ನಾನು ಅರ್ಜಿ ಸಲ್ಲಿಸಿಲ್ಲ. ನಮ್ಮ ನೆಲಗುಡ್ಡ ಹೋಬಳಿಯ ಪಂಚಾಯತಿ ಬೂತರ್ಲಘಟ್ಟ ಗ್ರಾಮದಲ್ಲಿ ಇದೆ. ಸದ್ರಿ ಬೂತರ್ಲಘಟ್ಟ ನಮ್ಮ ಗ್ರಾಮಕ್ಕೆ ಹೊಂದಿಕೊಂಡು ಇದೆ. ನಾವು ದಾವೆಯಲ್ಲಿನ ಕಟ್ಟಡವನ್ನು 2014ರಲ್ಲಿ ನಿರ್ಮಾಣ ಮಾಡಲು ಪ್ರಾರಂಬಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2013ರಲ್ಲಿ ನಿರ್ಮಾಣ ಪ್ರಾರಂಭ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. 2013ರಲ್ಲಿ ಪ್ರಾರಂಭ ಮಾಡಿದ ಕುರಿತು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನಾನು 2013 ರಲ್ಲಿಯೇ ಪರವಾಣಿಗೆಯನ್ನು ಪಡೆದಿರುತ್ತೇನೆ. ಪರವಾಣಿಗೆಯನ್ನು ಪಡೆದುಕೊಂಡ ಬಗ್ಗೆ ಪಂಚಾಯತಿಯವರ ಸಾಕ್ಷ್ಯವನ್ನು ಮಾಡಿಸುವುದಿಲ್ಲ. ನಾವು ದಾವೇ ಚಾಲ್ತಿಯಲ್ಲಿ ಇದ್ದ ಸಮಯ ಮುಂಗೈಜೋರಿನಿಂದ ಬೇಕಾಯ್ದೆಶೀರವಾಗಿ ಕಟ್ಟಡವನ್ನು ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಬೇಕಾಯ್ದೆಶೀರ ಕಟ್ಟಡವನ್ನು ತೆಗೆಯಲು ನಾನು ಬಾಧ್ಯಸ್ತನಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆ ಚಾಲ್ತಿಯಲ್ಲಿ ಇರುವ ಸಮಯ ನಾವು ಕಟ್ಟಡವನ್ನು ನಿರ್ಮಾಣ ಮಾಡಿ ಮುಗಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವೇಯ ಮೊದಲೆ ನಿರ್ಮಾಣ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ

ಪೂರ್ವದಲ್ಲಿ ಕಟ್ಟಡ ನಿರ್ಮಾಣ ಮಾಡಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಸಾಕ್ಷಿಗೆ ಈಗ ಒಟ್ಟು 5 ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ವಾದಿಯ ಮತ್ತು ತನ್ನ ಮನೆಯ ಚಿತ್ರಣ ಕಂಡು ಬರುತ್ತದೆ ಎಂದು ಸಾಕ್ಷಿದಾರರು ಒಪ್ಪಿಕೊಂಡ ಮೇರೆಗೆ ನಿಪಿ_5 ರಿಂದ 9 ಎಂದು ಗುರ್ತಿಸಲಾಯಿತು. ನಾನು ಹೇಳುವಂತೆ ದಾವಾ ಪೂರ್ವದಲ್ಲಿ ನಾನು ಯೂವುದೇ ಕಟ್ಟಡವನ್ನು ನಿರ್ಮಾಣ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಚಾಲ್ತಿಯಲ್ಲಿ ಇದ್ದ ಸಮಯ ಕಟ್ಟಡ ಕಟ್ಟಿದರೂ ಈಗ ಅದನ್ನು ತೆಗೆದು ಹಾಕಬೇಕು ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಯೂವುದೇ ಪರವಾಣಿಗೆಯನ್ನು ಪಡೆಯದೆ ಬೇಕಾಯ್ದೆಶೀರವಾಗಿ ಕಟ್ಟಡವನ್ನು ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಾ ,**

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ
ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ಕುಂದಗೋಳ.